## ನಿಮ್ಮೊಡನೆ

# ಔಷಧಿಗಳೇಕೆ ದುಬಾರಿಯಾಗಿವೆ?

> ಒಂದೆಡೆ ಹೆಚ್ಚುತ್ತಿರುವ ಸಾಂಕ್ರಾಮಿಕ ರೋಗಗಳು, ಇನ್ನೊಂದೆಡೆ ಕೈಗೆಟುಕದ ಔಷಧಿ ಬೆಲೆಗಳು– ಎರಡೂ ಜನಸಾಮಾನ್ಯರನ್ನು ಕಿತ್ತು ತಿನ್ನುತ್ತಿವೆ.

ವೈದ್ಯವಿಜ್ಞಾನ ಮತ್ತು ತಂತ್ರಜ್ಞಾನ ಬೆಳೆದಂತೆ ಅನಾರೋಗ್ಯದ ಸಮಸ್ಯೆಗಳು ಕಡಿಮೆಯಾಗಬೇಕು. ಆದರೆ ಆಸ್ಪತ್ರೆಗಳ ಮತ್ತು ರೋಗಿಗಳ ಸಂಖ್ಯೆ ಒಂದೇ ಸಮನೆ ಏರುತ್ತಿದೆ. ಈಗಂತೂ ಎಲ್ಲೆಡೆ ಜ್ವರದ ರಾಜ್ಯಭಾರ. ಹಿಂದಿನಿಂದ ಇದ್ದ ಮಲೇರಿಯಾ, ಟೈಫಾಯ್ಡ್, ಫ್ಲೂಗಳ ಸಾಲಿಗೆ ಡೆಂಗೆ, ಚಿಕೂನ್ ಗುನ್ಯಾ ಎಂಬ ಮಾರಕ ಜ್ವರಗಳೂ ಸೇರಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಈ ವರ್ಷ ಅವೆರಡೂ ಅಲ್ಲದ ಸ್ಕ್ರಬ್ ಟೈಫಸ್ ಎಂಬ ಇನ್ನೊಂದು ಹೊಸ ಹೆಸರಿನ ಜ್ವರವೂ ಸೇರಿಕೊಂಡಿದೆ. ಜ್ವರ ಬರಲಿ; ಆದರೆ ಒಂದೆಡೆ ಶುರುವಾಗುವ ಈ ಜ್ವರ ಎಲ್ಲೆಡೆ ಸಾಂಕ್ರಾಮಿಕದಂತೆ ಹರಡುವುದು ಮಾತ್ರ ಆತಂಕಕಾರಿ ವಿದ್ಯಮಾನ. ಜ್ವರ ಹರಡದಂತೆ ತಡೆಯುವ ಸುಲಭ ವಿಧಾನಗಳನ್ನೂ ನಾವು ನಿರ್ಲಕ್ಷಿಸುತ್ತಿದ್ದೇವೆ. ಎಲ್ಲೆಡೆ ಕಸ ಹರಡುವುದು, ಶೌಚಾಲಯಗಳ ಕೊರತೆ, ಒಳಚರಂಡಿಗಳ ಕಳಪೆ ನಿರ್ವಹಣೆ, ಹೊಣೆಗೇಡಿತನದ ಸಾರ್ವಜನಿಕ ನಡವಳಿಕೆ, ಆರೋಗ್ಯದ ಕುರಿತ ನಿಷ್ಕಾಳಜಿ– ಹೀಗೆ ಜ್ವರ ಸಾಂಕ್ರಾಮಿಕವಾಗಿ ಹರಡಲು ಅನೇಕ ಕಾರಣಗಳಿವೆ. ಇದರ ಜತೆಗೆ ಸರ್ಕಾರಿ ಆರೋಗ್ಯ ಕೇಂದ್ರಗಳ ಅಸಹಾಯಕತೆ ಮತ್ತು ನಿಷ್ಕ್ರಿಯತೆ, ಖಾಸಗಿ ಆಸ್ಪತ್ರೆಗಳ ಸುಲಿಗೆಕೋರತನ ಎರಡೂ ಸೇರಿ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿದೆ.

ಅನಾರೋಗ್ಯ ಕಾಡುವುದು ಸಹಜವೇ. ಎಷ್ಟೇ ಶುಚಿಯಾಗಿದ್ದು, ಆರೋಗ್ಯದ ಬಗ್ಗೆ ಕಾಳಜಿ ವಹಿಸಿದರೂ ಯಾವ ಅನಾರೋಗ್ಯವೂ ಬರದಂತೆ ತಡೆಯುವುದು ಅಸಾಧ್ಯ. ಹೀಗೆ ರೋಗಗಳು ಕಾಡಿದಾಗ ಆರೋಗ್ಯಪೂರ್ಣ ಸಮಾಜದಲ್ಲಿ ಎಲ್ಲರಿಗೂ ಚಿಕಿತ್ಸೆ ಮತ್ತು ಔಷಧಿಗಳು ಸುಲಭವಾಗಿ ಮತ್ತು ಅಗ್ಗವಾಗಿ ಲಭ್ಯವಾಗಬೇಕು. ಆದರೆ ನಮ್ಮ ದೇಶದಲ್ಲಿ ಅದೂ ಸಾಧ್ಯವಾಗುತ್ತಿಲ್ಲ. ಇಲ್ಲಿ ದುಬಾರಿ ಔಷಧಿಗಳೇ ದೊಡ್ಡ ವ್ಯಾಧಿ! ಲಕ್ಷಾಂತರ ಬಡವರು ಔಷಧಿ ಖರೀದಿಸಲಾಗದೆ ರೋಗದಿಂದ ಜೀವನಪೂರ್ತಿ ನರಳುವುದೂ, ಅಕಸ್ಮತ್ತಾಗಿ ಸಾಯುವುದೂ ನಡೆದೇ ಇದೆ.

'ಔಷಧಿಗಳ ಬೆಲೆ ನಿಯಂತ್ರಿಸಿ; ಬೆಲೆ ನೀತಿಯನ್ನು ಮರುಪರಿಶೀಲಿಸಿ' ಎಂದು ಸುಪ್ರೀಂಕೋರ್ಟ್ ಕಳೆದ ವಾರ ಮತ್ತೆ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಹೀಗೆ ಔಷಧಿಗಳ ದುಬಾರಿ ಬೆಲೆಗಳ ಬಗ್ಗೆ ಸುಪ್ರೀಂಕೋರ್ಟ್ ಕಿಡಿ ಕಾರುವುದು ಇದೇ ಮೊದಲ ಸಲ ಅಲ್ಲ. ಕಳೆದ ವರ್ಷವೂ ಹೀಗೆಯೇ ಹೇಳಿತ್ತು. ಆದರೆ ಔಷಧಿ ಕಂಪೆನಿಗಳ ಮುಲಾಜಿಗೆ ಸಿಲುಕಿದೆಯೋ ಎಂಬಂತೆ ವರ್ತಿಸುತ್ತಿರುವ ಸರ್ಕಾರಗಳು, ಈ ಕಡೆಗೆ ಗಮನ ಹರಿಸುತ್ತಲೇ ಇಲ್ಲ. ಈಗಿರುವ ಔಷಧಿಗಳ ಬೆಲೆ ನೀತಿಯನ್ನು ಪರಾಮರ್ಶಿಸಿ ಬಡವರಿಗೆ ನ್ಯಾಯಬೆಲೆಯಲ್ಲಿ ಔಷಧಿಗಳು ಲಭ್ಯವಾಗುವಂತೆ ಮಾಡಲು ಸುಪ್ರೀಂಕೋರ್ಟ್ ಆರು ತಿಂಗಳ ಗಡುವು ನೀಡಿದೆ. ಸರ್ಕಾರವೂ ಅದನ್ನು ಒಪ್ಪಿಕೊಂಡಿದ್ದು ಶೀಘ್ರ ಔಷಧಿ ಬೆಲೆ ನೀತಿಗೆ ತಿದ್ದುಪಡಿ ತರುವುದಾಗಿ ಒಪ್ಪಿಕೊಂಡಿದೆ.

ಸಾಂಕ್ರಾಮಿಕವಾಗಿ ಕಾಣಿಸಿಕೊಳ್ಳುವ ರೋಗಗಳ ಔಷಧಿ ದುಬಾರಿಯಾಗಬಾರದು ಎನ್ನುವ ಸುಪ್ರೀಂಕೋರ್ಟಿನ ಕಳಕಳಿ ಮೆಚ್ಚುವಂತಹದ್ದೇ. ಮಾರಕ ರೋಗಗಳ ಅಗತ್ಯ ಔಷಧಿಗಳ ಏರುತ್ತಿರುವ ಬೆಲೆಯನ್ನು ತಕ್ಷಣ ನಿಯಂತ್ರಿಸುವ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಕೆಲವು ಔಷಧಿಗಳ ಬೆಲೆಯಂತೂ 40 ಪಟ್ಟು ಹೆಚ್ಚಿದೆ ಎನ್ನುವುದರ ಬಗ್ಗೆಯೂ ಕೋರ್ಟ್ ಆತಂಕ ವ್ಯಕ್ತಪಡಿಸಿದೆ. ಜನರಿಕ್ ಔಷಧಿ ಮಳಿಗೆಗಳಲ್ಲೂ ಔಷಧಿಗಳ ಬೆಲೆ, ವಾಸ್ತವಿಕ ಬೆಲೆಗಿಂತ ಐದಾರು ಪಟ್ಟು ಹೆಚ್ಚೇ ಇದೆ. ಔಷಧಿ ತಯಾರಿಕಾ ಕಂಪೆನಿಗಳು ಔಷಧಿಗಳ ಮೇಲೆ ಪ್ರಚಾರ ವೆಚ್ಚ, ಮಾರುಕಟ್ಟೆ ವೆಚ್ಚ, ಮತ್ತಿತರ ವೆಚ್ಚಗಳನ್ನು ಸೇರಿಸಿ ಜನಸಾಮಾನ್ಯರಿಗೆ ಔಷಧಿಗಳು ದುಬಾರಿಯಾಗುವಂತೆ ಮಾಡಿವೆ. ಜತೆಗೆ ತಯಾರಕರು ಮತ್ತು ಡೀಲರ್‌ಗಳ ಲಾಭದ ಪ್ರಮಾಣವೂ ಹೆಚ್ಚಿದ್ದು, ಮಧ್ಯಮ ವರ್ಗದವರೂ ಔಷಧಿಯ ಬೆಲೆ ಕೇಳಿ ಹೌಹಾರುವಂತಾಗಿದೆ. ಸರ್ಕಾರದ ಬೆಲೆ ನೀತಿ ಮಾರುಕಟ್ಟೆ ಕೇಂದ್ರಿತವಾಗಿದೆಯೇ ಹೊರತು, ವಾಸ್ತವಿಕ ಬೆಲೆ ಕೇಂದ್ರಿತವಾಗಿಲ್ಲ. ಮುಖ್ಯವಾಗಿ ಬಹುರಾಷ್ಟ್ರೀಯ ಕಂಪೆನಿಗಳು ಔಷಧಿ ಮಾರುಕಟ್ಟೆಯ ಮೇಲೆ ನಿಯಂತ್ರಣ ಸಾಧಿಸಿದ್ದು, ಸರ್ಕಾರದ ನೀತಿ ನಿರೂಪಣೆಯ ಮೇಲೂ ಈ ಕಂಪೆನಿಗಳು ಪ್ರಭಾವ ಬೀರಿರುವುದು ಎದ್ದು ಕಾಣುತ್ತಿದೆ. ಒಂದೆಡೆ ಹೆಚ್ಚುತ್ತಿರುವ ಸಾಂಕ್ರಾಮಿಕ ರೋಗಗಳು, ಇನ್ನೊಂದೆಡೆ ಕೈಗೆಟುಕದ ಔಷಧಿ ಬೆಲೆಗಳು– ಎರಡೂ ಜನಸಾಮಾನ್ಯರನ್ನು ಕಿತ್ತು ತಿನ್ನುತ್ತಿವೆ. ಸುಪ್ರೀಂಕೋರ್ಟಿನ ಕಾಳಜಿಯನ್ನು ಅರ್ಥ ಮಾಡಿಕೊಂಡು ಸರ್ಕಾರವು ತುರ್ತಾಗಿ ಔಷಧಿಗಳ ಬೆಲೆಯನ್ನು ನಿಯಂತ್ರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಹೊಸ ಬೆಲೆ ನೀತಿ ರೂಪಿಸಲು ಆರು ತಿಂಗಳವರೆಗೂ ಕಾಯುವುದು ಕೂಡಾ ಸರಿಯಲ್ಲ.

■ ಬಿ.ಎಂ.ಹನೀಫ್



ಈಶ್ವರ್